


International Journal of Kannada Research
www.kannadajournal.com

ISSN: 2454–5813
IJKR 2024; 10(3): 28-31
© 2024 IJKR
www.kannadajournal.com
Received: 24-05-2024
Accepted: 28-06-2024

**ಡಾ.ಡಿ.ರವಿ**
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹನಗೂಡು, ಹುಣಸೂರು ತಾ॥, ಮೈಸೂರು ಜಿಲ್ಲೆ, ಕರ್ನಾಟಕ, ಭಾರತ

**Corresponding Author:**
**ಡಾ.ಡಿ.ರವಿ**
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹನಗೂಡು, ಹುಣಸೂರು ತಾ॥, ಮೈಸೂರು ಜಿಲ್ಲೆ, ಕರ್ನಾಟಕ, ಭಾರತ

# ಕನಕದಾಸರ ರಾಮಧಾನ್ಯ ಚರಿತ್ರೆ: ವಿಶ್ಲೇಷಣಾತ್ಮಕ ಅಧ್ಯಯನ

**ಡಾ.ಡಿ.ರವಿ**

**DOI:** https://doi.org/10.22271/24545813.2024.v10.i3a.984

**ಪೀಠಿಕೆ**

ಕನಕದಾಸರು (೧೫೦೮–೧೬೦೮) ಪುರಂದರದಾಸರ ಒಡನಾಡಿಗಳಾಗಿ ವ್ಯಾಸರಾಜರ ಆಶ್ರಯದಲ್ಲಿದ್ದ ಜ್ಞಾನ, ಭಕ್ತಿ, ವೈರಾಗ್ಯಗಳಿಂದ ಶ್ರೀಹರಿಯ ಒಲಮೆಯನ್ನ ಸಂಪಾದಿಸಿಕೊಂಡು ತಮ್ಮ ಗುರುಗಳಾದ ವ್ಯಾಸತೀರ್ಥರಿಗೆ ಶ್ರೀಹರಿಯ ದರ್ಶನ ಮಾಡಿಸಿ ದಾಸ ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ದರಾಗಿದ್ದಾರೆ. ಕನಕದಾಸರ ಜಾತಿ, ಊರುಗಳ ಬಗ್ಗೆ ಹಲವು ಜಿಜ್ಞಾಸೆಗಳವೆಯಾದರೂ ಇಂದಿನ ಹಾವೇರಿ ಜಿಲ್ಲೆಯ ‘ಬಾಡ’ ಗ್ರಾಮದ ಬೀರಪ್ಪ ಹಾಗೂ ಬಚ್ಚಮ್ಮ ದಂಪತಿಗಳ ಮಗನಾಗಿ ಜನಿಸಿದಾಗ ‘ತಿಮ್ಮಪ್ಪ’ ಎಂದು ಹೆಸರಿಟ್ಟರು. ತಿಮ್ಮಪ್ಪ ಬೆಳದು ದೊಡ್ಡವರಾಗುತ್ತಿದ್ದಾಗ ಭೂಮಿಯಲ್ಲಿ ‘ಕನಕ’(ಚಿನ್ನ) ದೊರೆತುದರಿಂದ ‘ಕನಕಪ್ಪ’ನೆಂದೇ ಊರಿನಲ್ಲಿ ಪ್ರಸಿದ್ಧರಾದರು. ರಣವಿದ್ಯೆಯಲ್ಲಿ ಪ್ರವೀಣರಾಗಿ ವಿಜಯನಗರದ ಸೈನ್ಯದಲ್ಲಿ ಉನ್ನತ ಹುದ್ದೆಯಲ್ಲಿದ್ದರೂ ಕನಕ ನಾಯಕನಿಗೆ ಆಗ್ಗಾಗ್ಗೆ ಶ್ರೀ ಹರಿಯೇ ಕನಸಿನಲ್ಲಿ ಬಂದು ದಾಸನಾಗಬೇಕೆಂದು ಹೇಳುತ್ತಿದ್ದನೆಂದು ಪ್ರತೀತಿ. ಒಂದು ಯುದ್ಧದಲ್ಲಿ ಕನಕನಾಯಕ ಸೋತು ದೀನನಾದಾಗ ಶ್ರೀಹರಿಯು ಮತ್ತೊಮ್ಮೆ “ದಾಸನಾಗೆಂದು” ಹೇಳಿದಾಗ ಜೀವನದ ಕ್ಷಣಿಕತೆಯ ಅರಿವಾಗಿ ಜ್ಞಾನೋದಯದಿಂದ ಕಾಲಿಗೆ ಗೆಜ್ಜೆ ಕಟ್ಟಿ ತಂಬೂರಿ ತಾಳಗಳನ್ನು ಹಿಡಿದು ಹರಿದಾಸರಾದರು.

ಅನುಭವಿಗಳಾದ ಭಕ್ತ ಕನಕದಾಸರು ಶ್ರೀಹರಿಯ ಗಾನದಲ್ಲಿ ನಿರತರಾದಾಗ ಲೋಕವನ್ನೇ ಅವರು ಮರೆಯುತ್ತಿದ್ದರು. ತಮ್ಮ ಹೃದಯ ಕಮಲದಲ್ಲಿ ಬಿಂಬ ಮೂರುತಿಯ ದರ್ಶನವನ್ನು ಪಡೆದಾಗ ಅವರ ಪ್ರತಿಭಾಸಂಪನ್ನತೆಯಿಂದ ರಾಗಬದ್ಧವಾಗಿ ಮೂಡಿಬಂದ ವಾಕ್ಯಗಳು ಶ್ರೇಷ್ಠ ಕೀರ್ತನೆಗಳಾದವು. ಅವರ ಕೀರ್ತನೆಗಳಲ್ಲಿ “ಕಾಗೆನೆಲೆಯಾದಿಕೇಶವ” ಎಂಬ ಅಂಕಿತದ ಮೂಲಕ ಇವರ ಕೀರ್ತನೆಗಳು ಹಾಗೂ ಕೃತಿಗಳಲ್ಲಿ ದಾಸರ ವೈರಾಗ್ಯ, ದೈವಭಕ್ತಿ, ಆಳವಾದಜ್ಞಾನ, ಮಧ್ವಮತದಲ್ಲಿ ಶ್ರದ್ಧೆಗಳೇ ಅಲ್ಲದೇ, ಸಮಾಜದ ಡೊಂಕನ್ನು ತಿದ್ದುವ ಜಾಣನುಡಿಗಳೂ ಉಂಟು. ಕುಲವನ್ನು ಕುರಿತು ಅವರು ಹಾಡಿರುವ ಕೃತಿಯಂತೂ ಕನ್ನಡ ನಾಡು–ನುಡಿಗಳಿರುವವರೆಗೂ ಜನತೆ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂಥದಾಗಿದೆ.

‘ಕುಲ ಕುಲ ಕುಲವೆನ್ನೂತಿಹರೂ ಕುಲವಾವುದು ಸತ್ಯ ಸುಜನರಿಗೆ’, ‘ಎಲ್ಲರು ಮಾಡುವುದು ಹೊಟ್ಟೆಗಾಗಿ, ಗೇಣುಬಟ್ಟೆಗಾಗಿ’, ‘ತಲ್ಲಣಿಸದಿರು ಕಂಡ್ಯ ತಾಳು ಮನವೆ’, ‘ದಾಸರ ದಾಸ ನಾನು’, ‘ಬಡದೀಶ ಕಾಯ್ದುಕೊಳ್ಳೆ’, ‘ಬಾಗಿಲನು ತೆಗೆದು ಸೇವೆಯನ್ನು ಕೊಡು ಹರಿಯೆ’, ‘ಯಾತರ ಕುಲವಯ್ಯ, ಆತನೊಲಿದಮೇಲೆ?’, ‘ಅಜ್ಞಾನಿಗಳು ಕೂಡ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡೆ ಜಗಳವೇ ಲೇಸು’, ‘ಸತ್ಯವಂತರ ಸಂಗವಿರಲು ತೀರ್ಥ ಏತಕೆ?’ ‘ನೀ ಮಾಯೆಯೊಳಗೋ? ನಿನ್ನೊಳು ಮಯೆಯೋ?’ ‘ಆವಬಲವಿದ್ದರೇನು? ದೈವಬಲವಿಲ್ಲದವಗೆ? ಮೊದಲಾದ ಕನಕದಾಸರ ಕೀರ್ತನೆಗಳು ಇಂದಿಗೂ ಜನಸಾಮಾನ್ಯರ ನಾಲಿಗೆಯ ಮೇಲೆ ನಲಿಯುತ್ತಿದ್ದು, ಕನಕದಾಸರ ಆಧ್ಯಾತ್ಮಕ ಅರಿವು, ವಿದ್ವತ್ತಿನ ಗರಿಮೆ, ಲೋಕಾನುಭವದ ಶ್ರೀಹರಿಯ ಒಲಮೆಗಾಗಿ ಅವರ ಸರ್ವಾರ್ಪಣ ಮನೋಭಾವಗಳೆಷ್ಟೆಂಬುದನ್ನು ಸುಲಭವಾಗಿ ಗ್ರಹಿಸಬಹುದು.

ಕನಕದಾಸರ ಕೃತಿಗಳ ಮತ್ತೊಂದು ವೈಶಿಷ್ಟ್ಯ ಅವರಮುಂಡಿಗೆಗಳಲ್ಲಿದೆ. ಈ ಮುಂಡಿಗೆಗಳು ಒಗಟಿನಂತಿದ್ದು ಬುದ್ಧಿಗೆ ಆಹಾರವಾಗಿ ಅದನ್ನು ಬಿಡಿಸಿದಾಗ ಹೃದಯಕ್ಕೆ ಆಹ್ಲಾದವುಂಟಾಗುವುದು. ಹದಿನೆಂಟು ಪುರಾಣಗಳಲ್ಲಿ ಬರುವ ಅನೇಕ ಕಥೆಗಳ ಸಾರವನ್ನು ಒಂದೊಂದು ಸಾಲಿನಲ್ಲೆಯೇ ಮಾರ್ಮಿಕವಾಗಿ ಜೋಡಿಸಿರುವುದು; ಕನಕದಾಸರ ವಿದ್ವತ್ತಿಗೆ ಸಾಕ್ಷಿಯಾಗಿದೆ. ಇಲ್ಲಿ ದಾಸರ ಮಾತು ಹೆಚ್ಚುಹರಿತ, ಸೂಕ್ಷ್ಮ ಮತ್ತು ಆಕರ್ಷಕ ಕನಕದಾಸರ ವಿದ್ವತ್ತು ಪ್ರತಿಭೆಗೆ ಮುಂಡಿಗೆಗಳು ಪ್ರತೀಕವಾಗಿವೆ. ಅಂತಹ ನುಡಿಗಳಲ್ಲಿ ಒಂದನ್ನು ಉಲ್ಲೇಖಿಸಲಾಗಿದೆ.

ಗಿಳಿನಾಯಿ ಪೆಸರಿವನರೊಳು ಮುಗಿಲ ಹೊಳೆಯ ಹೊಟ್ಟೆಲಿ ಹುಟ್ಟಿದವರೊಳು ಕೆಳದಿಯ ಜರೆದು ಶ್ರೀಹರಿ ದಿನಗೆದ್ದಂಥ ಹಳಬರೊಳಿರಿಸು ಕಂಡ್ಯ ಎನ್ನನು'.

ಇಲ್ಲಿ ಶುಕ, ಶೌನಕರನ್ನು ಇಚ್ಛಾಮರಣಿಗಳಾದ ಭೀಷ್ಮಾಚಾರ್ಮರನ್ನು ಏಕಾದಶೀ ವೀರ ರುಕ್ಮಾಂಗದರ ನಿಷ್ಠೆಗಳನ್ನು

**ರಾಮಧಾನ್ಯ ಚರಿತೆ**

ಕನಕದಾಸರ ವೈಶಿಷ್ಟ್ಯಪೂರ್ಣವಾದ ಕೃತಿಗಳಲ್ಲಿ 'ರಾಮಧಾನ್ಯ ಚರಿತ್ರೆ' ಪ್ರಮುಖ ವಾದುದ್ದಾಗಿದೆ. ಇದೊಂದು ೧೫೬ ಪದ್ಯಗಳುಳ್ಳ ಖಂಡಕಾವ್ಯ. ಭಾಮಿನಿ ಷಟ್ಪದಿ ಛಂದಸ್ಸಿನಲ್ಲಿ ರಚಿತವಾಗಿರುವ ಈ ಕೃತಿ ಪೌರಾಣಿಕ ವಿನ್ಯಾಸದಂತೆ ಭಾಸವಾದರೂ ಅಂತರ್ಯದಲ್ಲಿ ವಿಚಿತ್ರ ವಿಡಂಬನೆಯನ್ನೊಳಗೊಂಡಿದೆ.

"ರಾಮಧಾನ್ಯದಕೃತಿಯನೀಜನಂ
ಸ್ತೋಮವೆಲ್ಲಾದರಿಸುವಂದದಿ
ಭೂಮಿಗಚ್ಚರಿಯಾಗಿಪೇಳುವೆನೀಮಹಾಕಥೆಯ"

ಎಂದಿದ್ದಾರೆ. ಶ್ರೀರಾಮಚಂದ್ರನು ಲಂಕಾಧಿಪತಿಯಾದ ರಾವಣನ್ನು ನಿಗ್ರಹಿಸಿ ಋಷಿಗಳ ಆಶ್ರಮಕ್ಕೆ ಆಗಮಿಸಿದಾಗ ಋಷಿಗಳು ರಾಮನನ್ನು ಉಪಚರಿಸಿ ನಾನಾ ಧಾನ್ಯಗಳಿಂದ ಭೋಜನವನ್ನು ಮಾಡಿಸುತ್ತಾರೆ. ಸಿರಿಧಾನ್ಯಗಳ ಸವಿನೋಡಿದ ಇವರು ಅವುಗಳನ್ನು ವೀಕ್ಷಿಸಲು ಅಪೇಕ್ಷಿಸುತ್ತಾರೆ. ನಾನಾ ಧಾನ್ಯಗಳಲ್ಲಿ ಯಾವುದು ಶ್ರೇಷ್ಠವೆಂದು ತೀರ್ಮಾನಿಸುವಾಗ ನರೆದಲೆಗೆ(ರಾಗಿ) ಹಾಗೂ ವ್ರಿಹಿ(ಭತ್ತ)ಗಳ ನಡುವೆ ನಾನೇ ಶ್ರೇಷ್ಠವೆಂದು ವಿವಾದವೊಂದು ಆರಂಭಗೊಳ್ಳುತ್ತದೆ. ಪರಿಸ್ಥಿತಿ ವಿಪರೀತಕ್ಕೆ ಹೋಗುತ್ತಿರುವುದನ್ನು ನೋಡಿದ ರಾಮನು ರಾಗಿ, ಭತ್ತಗಳನ್ನು ಆರು ತಿಂಗಳುಗಳ ಕಾಲ ಸೆರೆಮನೆಯಲ್ಲಿಡುವಂತೆ ಆಜ್ಞಾಪಿಸುತ್ತಾನೆ. ಗಡವು ಮುಗಿದಾಗ ಇಬ್ಬರನ್ನು ಆಹ್ವಾನಿಸಿ ವಿಚಾರಿಸಿದ ವ್ರಿಹಿ(ಭತ್ತ) ನಿಸ್ಸಾರವೂ ಕಾಂತಿಹೀನವೂ ಆಗಿತ್ತು. ನರೆದೆಲೆಗೆ(ರಾಗಿ) ಸತ್ವವಾಗಿಯೂ ವರ್ಣಸಹಿತವಾಗಿಯೂ ಇರುವುದನ್ನು ಕಂಡು ರಾಮ ಅದಕ್ಕೆ 'ರಾಘವ' ಎಂದು ತನ್ನ ನಾಮಾಂಕಿತವನ್ನಿಟ್ಟ. ಲಗತ್ತಿನಿಂದಾಗಿ ನರೆದಲೆಗನಿಗೆ 'ರಾಗಿ' ಎಂಬ ಹೆಸರೇ ಶಾಶ್ವತವಾಯಿತು. ಈ ರೀತಿಯ ಸಂವಾದವನ್ನು ಕನಕದಾಸರು ನವಿರಾದ ತಿಳಿ ಹಾಸ್ಯದೊಂದಿಗೆ ಚಮತ್ಕಾರದ ವಿಡಂಬನೆಯಿಂದ 'ರಾಗಿ'ಯನ್ನು 'ರಾಘವ'ವೆಂದು ವೈಭವೀಕರಿಸಿ, ಬತ್ತವನ್ನು ಶ್ರದ್ಧಾನ್ನವೆಂದು ತುಚ್ಛೀಕರಿಸಿ ಚಿತ್ರಿಸಿದ್ದಾರೆ.

ಎಚ್ಎಲ್ನಾಗೇಗೌಡಅವರು'ಹೂವಿನಿಂದ ನಾರು ಸ್ವರ್ಗಸೇರಿತು' ಎಂಬಂತೆ ರಾಮನಾಮ ಪಡೆದು ಬಡವರ ಆಹಾರವಾದ ರಾಗಿ ರಾಮತತ್ವದ ಸಿದ್ಧಿಗೇರಿದೆ, ಎಂದರೆ, ಪ್ರೊ. ದೇಜಗೌಅವರಿಗೆ"ಸ್ಪೃಶ್ಯಹಾಗೂಅಸ್ಪೃಶ್ಯರನಡುವಿನವರ್ಗ ಸಂಘರ್ಷವಾಗಿ ಕಂಡಿದೆ. ಖ್ಯಾತ ಸಂಶೋಧಕರಾದ ಎಂ. ಚಿದಾನಂದ ಮೂರ್ತಿ ಅವರು ರಾಮಧಾನ್ಯ ಚರಿತೆಯನ್ನು ಕನಕದಾಸರ ಆತ್ಮ ಚರಿತ್ರಾತ್ಮಕ ಕೃತಿಯಾಗಿ ವೀಕ್ಷಿಸಿದ್ದಾರೆ. ಆತ ಕೆಳಜಾತಿಯಲ್ಲಿ ಜನಿಸಿದ ಒಂದೇ ಕಾರಣದಿಂದ ಸಾಮಾಜಿಕ ಅನ್ಯಾಯವನ್ನು ಅನುಭವಿಸಿದನ್ನು ಸೂಚಿಸುತ್ತದೆಂದೂ ವರ್ಗ ಹೋರಾಟವನ್ನು ಸಂಕೇತಿಸುತ್ತದೆಂದೂ ಗುರುತಿಸಿದ್ದಾರೆ. ಬಡವ, ಶ್ರೀಮಂತ, ಮೇಲ್ಜಾತಿ, ಕೆಳಜಾತಿ, ಕೆಳವರ್ಗದವರ ಪ್ರತಿಭಟನೆಗೆ ಸಂಬಂಧಿಸಿದ್ದು' ಎಂದಿದ್ದಾರೆ. (ಕನಕ ಕಿರಣ ಪು.ಸಂ೨, ೧೯೮೨) ರಾಮಧಾನ್ಯ ಚರಿತೆ ಕೃತಿಯನ್ನು ಮುಖ್ಯವಾಗಿ ಅವಲೋಕಿಸಿದರೆ, ಇದು ಜಾತಿ ಸಂಘರ್ಷವಾಗಿದ್ದು, ಮೇಲ್ವರ್ಗದ ಶ್ರೀಮಂತರು ಅಂತಸ್ಸತ್ವವಿಲ್ಲದವರಾಗಿದ್ದು ಕೇವಲ ಅಹಂಕಾರಿಗಳಾಗಿ ಬಾಹ್ಯಾಡಂಬರದಿಂದ ಬದುಕುತ್ತಾರೆಂಬುದು ಕವಿಯ ಅಭಿಪ್ರಾಯವಾಗಿದೆ. ಅಷ್ಟೇ ಅಲ್ಲದೆ ಈ ಸಾಮಾಜಿಕ ಅಂಕುಡೊಂಕುಗಳು ಸಾಮಾನ್ಯರಿಗೆ ಅರಿವಾಗಿರಲೆಂಬ ಆಶಯವೂ ಇರುವುದುಂಟು ಕವಿಯ ವಿಡಂಬನೆಯಲ್ಲಿ ಕಹಿಯಿದೆ, ವಿಷವಿಲ್ಲ, [illegible], ಮುಂಡಿ ಕೋಪವಿದೆ. ವೈರವಿಲ್ಲ, ಕರ್ತವ್ಯ ಪ್ರಜ್ಞೆ, ಸತ್ಯನಿಷ್ಠೆ, ಲೋಕ ಕಾರುಣ್ಯ, ನೈತಿಕ ಶ್ರದ್ಧೆ, ಮೇಲಾಗಿ ಧರ್ಮ, ಕೋಪ ಇವು ಇದರ ಮುಖ್ಯ ತಿರುಳು ಎಂಬುದು ನಾಡೋಜ ದೇಜಗೌ ಅವರ ನಿಲುವಾಗಿದೆ.

**ಕಥಾವಸ್ತು**

ರಾಮಧಾನ್ಯ ಚರಿತೆಯ ಆರಂಭದಲ್ಲಿ ಶ್ರೀರಾಮನನ್ನು ಸ್ಮರಿಸುತ್ತಾ 'ಭೂಮಿಗಚ್ಚರಿಯಾಗಿ ಪೇಳುವೆನೀ ಮಹಾ ಕಥೆಯ' ಎಂದು ಕಥೆಯನ್ನು ವಿವರಿಸಲಾಗಿದೆ. ರಾಮನ ಚರಿತ್ರೆಯಲ್ಲಿಯೇ ನರೆದಲೆಗೆ ಹಾಗೂ ವ್ರಿಹಿಯರ ಕಥೆಯನ್ನು ವರ್ಣಿಸಲಾಗಿದೆ. ಶ್ರೀರಾಮ ಜನಕನ ಅಜ್ಞೆಯಂತೆ ಸೀತೆ–ಲಕ್ಷ್ಮಣರೊಂದಿಗೆ ವನವಾಸಕ್ಕೆ ಹೋದಾಗ ರಾವಣನು ಸೀತೆಯನ್ನು ಅಪಹರಿಸುತ್ತಾನೆ. ಈ ವಿಷಯ ತಿಳಿದ ರಾಮನು ಸುಗ್ರೀವಾಂಜನೇಯರೊಂದಿಗೆ ಹೋಗಿ ವಾಲಿಯನ್ನು ಕೊಂದು ಲಂಕಾಪಟ್ಟಣಕ್ಕೆ ಮುತ್ತಿಗೆ ಹಾಕಿ ರಾವಣಾದಿಯಾಗಿ ಎಲ್ಲರನ್ನೂ ಕೊಂದು ವಿಭೀಷಣನಿಗೆ ಪಟ್ಟಾಭಿಷೇಕ ಮಾಡಿ ತನ್ನವರೊಂದಿಗೆ ವಾಲ್ಮೀಕಿ ಮಹರ್ಷಿಗಳ ತಪೋವನಕ್ಕೆಆಗಮಿಸುತ್ತಾನೆ. ಅಲ್ಲಿದ್ದ ಮಹಾಮುನಿಗಳೆಲ್ಲರೂ ಶ್ರೀರಾಮನಿಗೆ ಆಶೀರ್ವಾದಿಸಿ ರಾವಣನನ್ನು ಕೊಂದು ಮುನಿವರ್ಯರಿಗೆ ಅವನ ಕಿರುಕುಳವನ್ನು ತಪ್ಪಿಸಿದಿರೆಂದು ಹೊಗಳಿದಾಗ ಶ್ರೀರಾಮನು ನಮಗೆ ನಿಮ್ಮಡಿಯ ಕರುಣಾರಸವೇ ಸಲಹುವುದೆಂದು ಹೇಳಿ ಮುನಿಪೋತ್ತಮರನ್ನು ಸತ್ಕರಿಸಿದನು. ಎಲ್ಲರೂ ಹರ್ಷದಿಂದಿರುವಾಗಮುನಿಗಳು ಬಗೆಬಗೆಯ ಭಕ್ಷ್ಯಗಳೆಲ್ಲವನ್ನು ತಂದಿರಿಸಿದರು. ರಾಮನು ಸಂತೋಷಗೊಂಡು ತನ್ನ ನಿಜಬಲರನ್ನು ಕರೆಸಿ ರುಚಿ ನೋಡೆಂದಾಗ ರುಚಿನೋಡಿದ ವಾನಪಡೆ ಬಹಳ ಸೊಗಸಾಗಿದೆ ಎಂದು ಮುನಿವರರನ್ನು ಕೊಂಡಾಡಿದರು. ಅಂಜನದೇವಿಯ ಸುಪುತ್ರನಾದ ಆಂಜನೆಯನು ಧಾನ್ಯದ ತನುವ ಈ ಕ್ಷಣತರಿಸಿಂದು ಶ್ರೀರಾಮನಲ್ಲಿ ವಿನಂತಿಸಿಕೊಂಡನು.

ಶ್ರೀರಾಮಚಂದ್ರನು ಗೌತಮ ಮಹರ್ಷಿಗಳಿಗೆ ಹೇಳಿ ಧಾನ್ಯಗಳನ್ನು ತರಿಸಿದ, ನರೆದಲೆಗೆ, ನೆಲ್ಲು, ಹಾರಕ, ಖರಗು, ಜೋಳ, ಕಂಬು, ಸಾಮೆ, ಗೋದಿ, ನವಣೆ–ಎಂಬ ನವ ಧಾನ್ಯಗಳ ರಾಶಿಯೇ ಅಲ್ಲಿತ್ತು. ನವಧಾನ್ಯಗಳಲ್ಲವನ್ನು ನೋಡಿದ ಅರಸ ಇದರಲ್ಲಿ ಯಾವುದು ಶ್ರೇಷ್ಠ ಎಂದು ಅಲ್ಲಿದ್ದವರನ್ನು ಕೇಳಿದಾಗ ಒಬ್ಬೊಬ್ಬರು ಒಂದೊಂದು ಧಾನ್ಯಗಳ ಹೆಸರನ್ನು ಹೇಳಿದರು. ಶ್ರೀರಾಮಚಂದ್ರನು ಹಲವು ಹೆಸರುಗಳನ್ನು ಹೇಳದೆ ಒಂದನ್ನೇ ಹೇಳಿ ಎಂದಾಗ ಗೌತಮ ಮುನಿಗಳು 'ದೇಶಕತಿಶಯ ನರೆದಲೆಗನೆ ವಾಸಿ' ಎಂದರು ಗೌತಮರ ಮಾತನ್ನು ಕೇಳಿದ ವ್ರಿಹಿ (ಬತ್ತ) ಕೋಪಗೊಂಡು 'ಮುನಿಗಳೇ ನೀವು ಪಕ್ಷಪಾತ ಮಾಡಬಾರದಾಗಿತ್ತು. ಗೋದಿ, ನಾನು ಮೊದಲಾದ ಧಾನ್ಯಗಳಿರುವಾಗ ನರೆದಲೆಗನೆ ಶ್ರೇಷ್ಠ ವೆಂಬುದು ಮತವಲ್ಲವೆಂದು ಹೇಳಿ ಇದಕ್ಕೆ ಅವರು ಏನು ಹೇಳುವರೆಂಬುದನ್ನು ಕೇಳದೆ ನರೆದಲೆಗೆನ ಮೇಲೆಕೋಪಗೊಳ್ಳುತ್ತದೆ. "ಏನೆಲ್ಲವೋ ನರೆದಲೆಗೆ ನೀನು ಸಮಾನನೆಯೆನಗಿಲ್ಲಿ? ಮತಿಹೀನ ನೀನು? ಕುಲಹೀನ ನೀನು? ನೀನು ಪ್ರತಿಷ್ಠನೇ ನಿನ್ನನ್ನು ಸುಡಬೇಕು ಲೋಕದಲ್ಲಿ ಅಧಿಕ ಜ್ಞಾನಿಗಳು ಜರೆದು ನಿರಾಕರಿಸಿ ಬಿಡಲಂತು ನೀ ಶೂದ್ರಾನ್ನವಾದೆಯಲ್ಲ, ಸಾಕು ಬಿಡು ನೀನಾವ ಮಾನ್ಯನು ಕಡೆಗೆ ತೊಲಗೆಂದು ತನ್ನ ಮಹಿಮೆಯನ್ನು ಹೇಳಿಕೊಳ್ಳಲಾರಂಭಿಸಿತು:

ನಾನು ಒಳ್ಳೆಯ ವ್ರತಗಳಲ್ಲಿ ಪರಮ ಮಂತಾಕ್ಷತೆಗಳಲ್ಲಿ ಶುಭ ಶೋಭನದ ಆರತಿಗಳು ದೇವರ ನೈವೇದ್ಯದಲ್ಲಿ ಭೂಸುರರ ಮನೆಯಲ್ಲಿ ನಾನು ಯೋಗ್ಯನು ನಿನ್ಯಾವ ಯೋಗ್ಯನೋ ಭ್ರಷ್ಟಾತೊಲಗೆಂದ, ಕನಕದಾಸರು ಆ ಸಂಧರ್ಭವನ್ನು ಅರ್ಥಪೂರ್ಣವಾಗಿ ವರ್ಣಿಸಿದ್ದಾರೆ.

“ಪರಿಮಳದ ಚಂದನದ ತರುವಿಕೆ
ಸರಿಯೆವೊಣಗಿದ ಕಾಷ್ಠ ಗೋವಧ
ಕರೆದ ಹಾಲಿಗೆ ಕುರಿಯ ಹಾಲಂತರವೆ ಭಾವಿಸಲು
ಪರಮ ಸಾಹಸಿ ವೀರಹನುಮಗೆ
ಮರದ ಮೇಲಣ ಕಪಿಯು ತಾನಂ
ತರವೆ ಫಡ ನೀನೆನಗೆ ಸರಿಯೇ ಭ್ರಷ್ಟ ತೊಲಗೆಂದ” (೪೨)

ಅಷ್ಟೇ ಅಲ್ಲದೇ ತಾನು ಸುರನದಿ, ಗರುಡ, ಹಂಸ, ಕೋಗಿಲೆಎಂದುಹೊಗಳಿಕೊಂಡುನರೆದಲೆಗನಿಗೆ(ರಾಗಿ)
ಹಳ್ಳಿ, ಹದ್ದು, ಬಕ, ನಾಯಸ ಎಂದು ಜರಿದು ನುಡಿಯಿತು. ಇದನ್ನೆಲ್ಲ ಕೇಳಿಸಿಕೊಂಡ ನರೆದಲೆಗೆ ಕಂಗಟ್ಟು ಕೋಪಗೊಂಡು ಸಿಡಿಲ ಘರ್ಜನೆಯಂತೆ ವ್ರಿಹಿಯನ್ನು ನಿಂದಿಸತೊಡಗಿತು. ‘ನುಡಿಗೆ ಹೇಸದ ಬಂಡ ನಿನ್ನೊಡೆನೆ ಮಾತೇಕೆ, ಸತ್ಯಹೀನನು ನೀನು ಬಡವರನ್ನು ಕಣ್ಣೆತ್ತಿ ನೋಡದವ, ಶ್ರೀಮಂತರನ್ನು ಬೆನ್ನತ್ತಿ ಹೋಗುವವ, ಬಾಣಂತಿಗಳಿಗೆ ರೋಗಿಗಳಿಗೆ ಪತ್ಯ ನೀನು ಸತ್ತ ಹೆಣದ ಬಾಯಿಗೆ ತುತ್ತು ನೀನು, ನಿನ್ನ ಜನ್ಮ ನಿರರ್ಥಕ ಎಂದೇಳಿ ತನ್ನ ಜನ್ಮ ಎಷ್ಟು ಸಾರ್ಥಕವೆಂಬುದನ್ನು ನರೆದಲೆಗೆ ಹೀಗೆ ಹೇಳುತ್ತದೆ.

“ಮಳೆದಗೆದು ಬೆಳೆಯಡಗಿ ಕ್ಷಾಮದ
ವಿಲಯಕಾಲದೊಳನ್ನವಿಲ್ಲದೆ
ಅಳಿವ ಪ್ರಾಣಿಗಳಾದರಿಸಿಸಲಹುವೆನುಜಗವರಿಯೆ
ಎಲ್ಲವೂ ನೀನೆಲ್ಲಿಹೆಯೊ ನಿನ್ನಯ
ಬಳಗವದು ತಾನೆಲ್ಲಿಹುದುಯಾ
ಹಲವು ಹುಲುಧಾನ್ಯಗಳೆನಗೆ ಸರಿದೊರೆಯೆ ಕೇಳೆಂದ” (೪೩)

ಇದಕ್ಕೆ ಪ್ರತಿಯಾಗಿ ವ್ರಿಹಿ ಮತ್ತಷ್ಟು ಜಂಬದಿಂದ ‘ನಾನು ಕೊಳಕಾದ ಮಧುಪಾನವಾಗುತ್ತೇನೆ. ನೀನು ಕೊಳೆತಾಗ ತಿಂದರೆ ಹುಚ್ಚು ಹಿಡಿದು ಬುದ್ಧಿಭ್ರಮಣೆಯಾಗುತ್ತವೆ. ಎಂದಾಗ ನರೆದಲೆಗೆ ಪ್ರತಿಯಾಗಿ ‘ಸಾಕು ಮಾಡು ನಿನ್ನ ಅತಿಶಯದ ಮಾತುಗಳನ್ನು ನಿನ್ನೊಡನೆ ಮಾತನಾಡುವುದು ಹುರುಳಿಲ್ಲವೆಂದು ಸಭೆಯನ್ನುದ್ಧೇಶಿಸಿ, ನೀವೇ ತೀರ್ಮಾನಿಸಿ ಹೇಳಬೇಕೆಂದು ವಿನಂತಿಸಿಕೊಂಡಿತು. ಆಗ ಶ್ರೀರಾಮಚಂದ್ರನು ಇವರ ಸಮಸ್ಯೆಯನ್ನು ಬಗೆಹರಿಸುವ
ಬಗೆ ಯಾವುದೆಂದು ಯೋಚಿಸುತ್ತಾ ಈ ನ್ಯಾಯವನ್ನು ತೀರ್ಮಾನಿಸಲು ನಮಗಾಗದು, ಹರಿಹರ ವಿರಂಚಾದ್ಯರನ್ನು ಅಯೋಧ್ಯೆಗೆ ಕರೆಸುತ್ತೇನೆ. ಅವರು ಗುಣ ನೋಡಿ ಹೇಳುತ್ತಾರೆ.ಅಲ್ಲಿಯವರಗೂ ನೀವಿಬ್ಬರು ಆರು ತಿಂಗಳ ಸೆರೆಯೊಳಗಿರಬೇಕೆಂದು ರಾಜಾಜ್ಞೆ ಮಾಡಿ ಗೌತಮರಿಗೆ ಇಬ್ಬರನ್ನೊಪ್ಪಿಸಿ ಅಯೋಧ್ಯೆಗೆ ಹೊರಟು ಹೋದನು. ಆಗ
ನರೆದಲೆಗೆ ‘ನಮ್ಮನ್ನು ಸೆರೆಗೆ ತಳ್ಳಿ ಸಂಪತ್ತಿನ ಮದದಲ್ಲಿ ಮರೆತೀರ’ ಎಂದು ಕೈಮುಗಿದು ಶ್ರೀರಾಮನನ್ನು ವಿನಂತಿಸಿಕೊಂಡಿತು. ಇದಕ್ಕೆ ಶ್ರೀರಾಮಚಂದ್ರನು ಭರವಸೆಯನ್ನು ನೀಡಿನಿರ್ಗಮಿಸಿದ, ಆಯೋಧ್ಯೆಯನ್ನುಸೇರಿ ಸುಮಾರು ಆರೇಳು ತಿಂಗಳುಗಳಾಗಿ ಪಟ್ಟಾಭಿಷೇಕದ ವ್ಯವಸ್ಥೆಯೂ ನಡೆಯಿತು. ಈ ಸಮಾರಂಭಕ್ಕೆ ಆಪ್ತ ರಾಜಾಧಿರಾಜರು, ಅತ್ರಿ ಭಾರದ್ವಾಜ, ವಿಶ್ವಮಿತ್ರ, ವಾಸುದೇವ, ಅಗಸ್ತ್ಯ, ಕಣ್ವ, ಲಿಂಗೀರಸ? ಮಾರ್ಕಂಡೆಯ, ವಾಲ್ಮೀಕಿ ಮೊದಲಾದ ಮುನಿಶ್ರೇಷ್ಠರು ವಿದ್ವಾನ್‌ಮಣಿಗಳೂ, ಕವಿಪುಂಗರೂ ನೆರೆಹೊರೆಯವರೆಲ್ಲರೂ ಸೇರಿ ಶುಭ ಘಳಿಗೆಯಲ್ಲಿ ಶ್ರೀರಾಮನಿಗೆ ಪಟ್ಟಾಭಿಷೇಕ ನೆರವೇರಿಸಿದರು. ಆನಂತರ ನಾನಾ ಬಗೆಯ ನೃತ್ಯ ನರ್ತನಾದಿಗಳೆಲ್ಲವೂ ನಡೆದು ಎಲ್ಲರೂ ಸಂತಸಗೊಂಡರು. ಶ್ರೀರಾಮ ಮಾತ್ರ ಪಟ್ಟಾಭಿಷೇಕಸಂಭ್ರಮದಲ್ಲಿದರೂ ರಾಗಿಗೆ ಕೊಟ್ಟ ಮಾತನ್ನು ಮರೆಯಲಿಲ್ಲ.
ಮರುದಿನವೇ ಸಭೆಯನ್ನು ಸೇರಿಸಿ ನಸುನಗುತ್ತಾ ನರೆದಲೆಗೆ ಹಾಗೂ ವ್ರಿಹಿ ಸೆರೆಯೊಳಗಿದ್ದು ಏಳುತಿಂಗಳಿದ್ದು ಏಳುತಿಂಗಳುಗಳೇ ಸಂಧಿ ಹೋದವು. ಅವರನ್ನು ಕರೆದುಕೊಂಡು ಬಾ ಎಂದು ಆಂಜನೇಯನಿಗೆ ಅಜ್ಞಾಪಿಸಿದ ಅವನ ಆಜ್ಞೆಯಂತೆ ಮಾರುತಿ ಪಂಚನದಿಯ ಬಳಿಗೆ ತೆರಳಿ ಗೌತಮರಿಗೆ ವಂದಿಸಿ ಸೆರೆಮನೆಯೊಳಗಿದ್ದವರನ್ನು (ನರೆದಲೆಗ ಹಾಗೂ ವ್ರಿಹಿ) ಮುನಿಶ್ರೇಷ್ಠರನ್ನು ಕರೆದುಕೊಂಡು ಅಯೋಧ್ಯೆಗೆ ಆಗಮಿಸಿದ, ಶ್ರೀರಾಮನು ಇವರನ್ನು ಕರೆತಂದದನ್ನು ನೋಡಿ ಗೌತಮಮುನಿಗಳನ್ನು ಉಪಚರಿಸಿದ, ಇವರ ನ್ಯಾಯವನ್ನು ಬಗೆಹರಿಸಬೇಕೆಂದು ರಾಮ ಹೃದಯ ಶುದ್ಧಿಯಲ್ಲಿ ತ್ರೈಭುವನಕರ್ತರು, ಇಂದ್ರ ಮೊದಲಾದವರನ್ನು ಸ್ಮರಿಸಿದಾಗ ಅವರೆಲ್ಲರೂ ಸಭೆಗೆ ಬಂದರು. ಈ ಓಲಗದಲಿ ಭೂಜಾಂಗಮರಸರುಕಿನ್ನರಯಕ್ಷರಾಕ್ಷಸರು, ಸೂರ್ಯಚಂದ್ರ ಮೊದಲಾದ ಮಹಾಮಹಿಮರು ಕ್ಷತ್ರಿಯ, ವರ್ತಕರು, ಕುಶಲಬುದ್ದಿವಂತರಲ್ಲೆ ಸೇರಿದರು. ಇಂತಹ ಸಭೆಯಲ್ಲಿ ಬುದ್ಧಿವಂತನಾದ ನೆರೆದಲೆಗ ಕೈಮುಗಿದು ‘ಧರಣಿಕಾಂತ ರಘುವರನೇ ಸುಬುದ್ಧಿಯನೆಂತು ನಮಗರುಹುವಿರಿ ಯದಪೇಳೆಂದ’ ಹೀಗೆ ವಿನಂತಿಸಿಕೊಂಡಾಗ ರಾಮ ನೃಪಾಲಘನ ತಪೋಮಹಿಮರಿಗೆ ‘ಮನವ ವಂಚಿಸಲಾಗದೀ ಧರ್ಮವನು ನೆರೆತಿಳಿದು ಅನುನಯದಿ ಪೇಳಿ ಇದರಲ್ಲಿ ಯಾರು ಗುಣಸಾರವನು ಎಂದನು, ದೇವೆಂದ್ರನು ನಸುನಗುತ್ತಾ ‘ಸಾರಹೃದಯವನು ನರೆದಲೆಗ ನಿಸ್ಸಾರನೀ ವ್ರಿಹಿ’ ಎಂದು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಅವರ ಮಾತಿಗೆ ನಾರದನು ಸಹಮತ ವ್ಯಕ್ತಪಡಿಸುತ್ತಾ ‘ನರದೆಲಗನೆ ಬಲಯುತ ಇವನು ಕಳೆಗುಂದಿಲ್ಲಾ ವ್ರಿಹಿ ಕಳೆಗೊಂದಿದ್ದಾನೆ’ ಎಂದನು. ಕಪಿಲ ಮುನಿಯೂ ನೆರೆದಲೆಗನನ್ನು ಮೆಚ್ಚಿ ಬಡವ ಬಲ್ಲಿದನನದೆ ಎಲ್ಲರನ್ನೂ ಸಲಹುವನೆಂದು ಹೊಗಳಿದನು. ಇಡೀ ಓಲಗವೇ ನರೆದಲಗನೆ ಶ್ರೇಷ್ಠ ಎಂದಿತು. ಆಗ ಶ್ರೀರಾಮ ಚಂದ್ರನು ನರೆದಗವನ್ನು ಮೆಚ್ಚಿ ತನ್ನ ಹೆಸರನ್ನು ಅದಕ್ಕೆ ಇಟ್ಟಾಗ ಅಲ್ಲಿಂದ ಅದು ‘ರಾಘವನೆಂದು ಜನಜನಿತವಾಯಿತು. ನೆರೆದ ಹಲವು ಮಹಾಮಹಿಮರು ಕಾಣಿಕೆಯನ್ನಿತ್ತು ಸನ್ಮಾನಿಸಿದರು.
ಬ್ರಹ್ಮನು ಕರಕಮಂಡಲ ಪಾತ್ರಯನ್ನು ಶಂಕರ ತ್ರಿಶೂಲವನ್ನೂ ನಾರದ ಚಕ್ರವನ್ನು ಇಂದ್ರನು ಉರುತರದ ಕೂರಿಗೆಯನ್ನೂ ಹೀಗೆ ಎಲ್ಲರೂ ಉಡುಗೊರೆಗಳನ್ನು ನೀಡುತ್ತಿರಲು ಪಾರ್ವತಿಯು ಸಹ ತನ್ನ ಸ್ತ್ರೀಬಳಗವನ್ನು ಕರೆದು ಭೂಲೋಕದಲ್ಲಿ ರಾಗಿಯನ್ನು ಬೆಳೆಯುವ ತಿಂಬುವವರ ಸೇವೆಗೆ ಕಳುಹಿಸಿದಳು.ಇದನೆಲ್ಲವನ್ನು ವೀಕ್ಷಿಸಿದ ಹನುಮಂತ ‘ಇನಕುಲೇಂದ್ರನ’ ಪಾದಕ್ಕೆ ನಮಿಸಿ ನೀವು ಆತನಿಗೆ ನಾಮಾಂಕಿತವನ್ನಿತ್ತಿರಿ

“ಸೇವಕನ ಹಿಂದುಳಿದುದೇವರು
ನೀವು ಮುಂದಡಿಯಿಡಲು ನಿಮ್ಮದ
ದಾದ ಗುಣವೆನೆ ಹನುಮನಾಡಿದ ನುಡಿಗೆ ನಸುನಗುತ
ನಾವು ಜನನದಿ ಮುಂದು ಕಲಹದ
ಠಾವಿನಲಿ ನಾ ಮುಂದೆ ನಡೆಯಂ
ದೀ ವಿಚಾರವ ತಿಳುಹಿದನು ನರನಾಥನನಿಲಜಗೆ” (೧೪೩)

ಇತ್ತ ಓಲಗದಲ್ಲಿ ಅಪಮಾನವನ್ನು ಅನುಭವಿಸುತ್ತ ನೋವಿನಲ್ಲಿದ್ದ ವ್ರಿಹಿಯನ್ನು ಕಂಡು ಶ್ರೀರಾಮನು 'ಏಕಪ್ಪ ವ್ಯವಸ ನಿನಗೆ ಈ ಭೂಮಿಯ ಮೇಲೆ ಕ್ಷಾಮ ಬಂದಾಗ ನರೆದಲೆಗ ಕರುಣೆಯಿಂದ ಲೋಕವನ್ನು ಕಾಪಾಡುತ್ತಾವೆಂಬ ಕಾರಣದಿಂದ ಆತನನ್ನು ಸತ್ಕರಿಸಿದೆವು. ನೀನು ದೀನರಲ್ಲಿ ದರಿದ್ರನರಲ್ಲಿ ನಿರ್ದಯನೆಂಬ ಕಾರಣದಿಂದ ಹೇಳಿದೆವಲ್ಲದೆ ನಿನ್ನನ್ನು ಯಾವುದಕ್ಕೂ ಪ್ರಯೋಜನವಿಲ್ಲವೆಂದು ನಿಂದಿಸಿಲ್ಲ, ನೀನು ಸುರದೇನುವಿಗೆ ಸಮ ಚಿಂತೆಯನ್ನು ಬಿಡು. ನೀವಿಬ್ಬರೂ ಭೂಮಿಯ ಮೇಲೆ ಹಿತದಿಂದ ಇರಬೇಕು ಎಂದನು. ಆಗ ರಾಗಿಯು ಆತನ ಕಂಬನಿಯನ್ನೊರಸಿ ಇಂದ್ರನ ಬಳಿಗೆ ಕಳಹುವೆ ನಿನ್ನ ಸಂಶಯವೇಕೆ ಮನಸ್ಸಿನಲ್ಲಿ ಶೌರ್ಯವನ್ನು ಕೈಕೊಂಡು ಸತ್ಯದ ದಾರಿ ತಪ್ಪದೇ ಜೋಳ ದೇಶವನ್ನು ನೀ ಸಲಹು ಎಂದು ನೇಮವನಿಟ್ಟು ಕಳುಹಿಸಿದ.

ಕನಕದಾಸರ ಸಾಮಾಜಿಕ ಪ್ರಜ್ಞೆಯಲ್ಲಿ ತಮ್ಮ ಸಮಕಾಲೀನ ಜೀವನದ ವಿವಿಧ ಮುಖಗಳ ನೈಜ ಚಿತ್ರಣ ಅನಾವರಣಗೊಂಡಿದೆ. ಸ್ಥಳೀಯ ಭಾಷೆಯ ದ್ರವ್ಯದಿಂದಲೇ ಸೃಷ್ಠಿಸಿಕೊಳ್ಳುವ ಉಪಮೆ, ದೃಷ್ಟಾಂತ, ರೂಪಕ, ನಾಣ್ಣುಡಿಗಳು ಕಾವ್ಯದ ರಕ್ತವಾಹಿಗಳಾಗಿ ಇಡೀ ಕಾವ್ಯಕ್ಕೆ ಸಾಮಾಜಿಕ ಪ್ರಜೆಯ ಜೀವದಾತುಗಳನ್ನು ಪೂರೈಸುತ್ತವೆ. 'ಊರಗುದ್ದಲಿಯಕೊಂಡು ನಾಡಕಾಲುವೆಯ ತೋಡುತರೆ ತಲೆ ಬಲ್ಲಿತೆಂದು ಕಲ್ಲನೇ ಹಾಯಬೇಡ', ಎನ್ನುವ ಉದಾಹರಣೆಗಳು ಉತ್ಕಟ ಸಾಮಾಜಿಕ ಪ್ರಜ್ಞೆಯಿಂದಲೇ ಬಂದಿವೆ. ಪೌರಾಣಿಕ ಪಾತ್ರಗಳು ಮಾನವೀಕರಣಗೊಂಡು ಸಾಮಾಜಿಕ ಪರಿಸರದಲ್ಲಿ ಆಪ್ತರಾಗಿ ಆತ್ಮಿಯವಾಗಿ ಓಡಾಡುತ್ತವೆ. ಕನಕದಾಸರ ಕೃತಿಗಳು ಮೂಲಭೂತವಾಗಿ ಸಮಾಜದ ಹಿತಚಿಂತನೆ ಹಾಗೂ ಕಳಕಳಿಯ ಜವಬ್ದಾರಿಯನ್ನು ಪ್ರತಿಬಿಂಬಿಸುತ್ತವೆ.

ಒಟ್ಟಿನಲ್ಲಿ ದಾಸಪಂಥದ ಪದ್ಯವ್ಯೂಹವನ್ನು ಪ್ರವೇಶಿಸಿದ ಏಕೈಕ ಶೂದ್ರರಾದ ಕನಕದಾಸರು ತಮ್ಮ ಭಕ್ತಿಯಿಂದ ದಾಸರ ಅನುಗ್ರಹಕ್ಕೆ ಪಾತ್ರರಾದುದೊಂದು ಪವಾಡವೇ ಆಗಿದೆ.

**ಆಕರಗ್ರಂಥಗಳು**

೧. ರಾಮಧಾನ್ಯಚರಿತ್ರೆ(ಸಂ) : ತಳಗೇರಿಕೆ.ಬಿ. ೧೯೩೯
೨. ಹರಿಭಕ್ತಪಾರ (ಸಂ) : ಮರುಳಯುತ ಸಾ.ಶ. ೧೯೯೧
೩. ಮೋಹನತರಂಗಿಣಿ(ಸಂ) : ಹಿರೇಮಠ ಆರ್.ಸಿ ೧೯೩೩
೪. ಕನಕದಾಸರು ಮತ್ತು ಅವರ ಕೃತಿಗಳು (ಸಂ): ಪುರೋಹಿತ.ಎಸ್.ಎ(೧೯೬೯)
೫. ಸುಧಾಕರ (ಸಂ) : ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು
೬. ಮುಗಳಿ ರಂ ಶ್ರೀ (ಸಂ) : ಶ್ರೀ ಕನಕದಾಸರ ವಿರಚಿತ ಹರಿಭಕ್ತಸಾರ– ೧೯೩೨
೭. ಎನ್.ಎನ್. ಚಿಕ್ಕಮಾದು : ವಚನ ಸಾಹಿತ್ಯ ಮತ್ತು ದಾಸಸಾಹಿತ್ಯಗಳ ಸಮೀಕ್ಷೆ–೨೦೧೧